ಆ) ಬಂಗಾರುಪೇಟೆ, ಬೇತಮಂಗಲ, ಚಿಕ್ಕಬಳ್ಳಾಪುರ, ಚಿಂತಾಮಣಿ ಬಟ್ಲಪಲ್ಲಿ, ಗೌರಿಬಿದನೂರು, ಶ್ರೀನಿವಾಸಪುರ, ಗೌನಪಲ್ಲಿ, ಗೂಳೂರು, ಬಾಗೇಪಲ್ಲಿ, ಮಾಲೂರು ಮುಳಬಾಗಿಲು, ಶಿಡ್ಲಘಟ್ಟ, ಗುಡಿಬಂಡೆ, ಹೀಗೆ ಒಟ್ಟು 14 ಸ್ಥಳಗಳನ್ನು ಗುರುತಿಸಲಾಗಿದೆ

ಇ) ಸದ್ಯಕ್ಕೆ ಈ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ

**600 (377) ಶ್ರೀ ಕ್ಯಾತಸಂದ್ರ ಎನ್ ರಾಜಣ್ಣ (ಬೆಳ್ಳಾವಿ) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?**

ಅ) ರಾಜ್ಯದ ಸಾರ್ವಜನಿಕ ಆಸ್ಪತ್ರೆಗಳಲ್ಲಿ ಮಂಜೂರಾತಿಯಾಗಿರುವ ವೈದ್ಯರ ಹುದ್ದೆಗಳೆಷ್ಟು? ಖಾಲಿ ಇರುವ ವೈದ್ಯರ ಹುದ್ದೆಗಳೆಷ್ಟು?

ಆ) ವೈದ್ಯರ ಕೊರತೆಯಿಂದಾಗಿ ಸಾರ್ವಜನಿಕರಿಗೆ ಉಂಟಾಗಿರುವ ತೊಂದರೆ ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ತುಮಕೂರು ಜಿಲ್ಲೆ ಬೆಳ್ಳಾವಿ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಖಾಲಿ ಇರುವ ವೈದ್ಯರನ್ನು ತುಂಬದಿರುವ ಬಗ್ಗೆ ಕಾರಣಗಳೇನು? ಹುದ್ದೆ ತುಂಬಲು ಕಾಲ ಮಿತಿ ಹಾಕಿಕೊಳ್ಳಲಾಗಿದೆಯೇ?

**ಶ್ರೀ ಆರ್ ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)**

ಅ) ರಾಜ್ಯದ ಸಾರ್ವಜನಿಕ ಆಸ್ಪತ್ರೆಗಳಲ್ಲಿ ಮಂಜೂರಾತಿಯಾಗಿರುವ ವೈದ್ಯರ ಹುದ್ದೆಗಳ ಸಂಖ್ಯೆ 5228 ಖಾಲಿ ಇರುವ ವೈದ್ಯರ ಸಂಖ್ಯೆ 781

ಆ) ಬಂದಿದೆ

ಇ) ತುಮಕೂರು ಜಿಲ್ಲೆ ಬೆಳ್ಳಾವಿ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ 10 ವೈದ್ಯರ ಹುದ್ದೆ ಮಂಜೂರಾಗಿದ್ದು 10 ವೈದ್ಯರು ಸಹ ಕರ್ತವ್ಯ ನಿರ್ವಹಿಸುತ್ತಿದ್ದಾರೆ ವೈದ್ಯರ ಹುದ್ದೆ ಖಾಲಿ ಇರುವುದಿಲ್ಲ

**601 (465) ಡಾ. ಮಹದೇವಪ್ಪ ಹೆಚ್ ಸಿ (ಟಿ. ನರಸೀಪುರ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?**

ಅ) ರಾಜ್ಯದಲ್ಲಿ ಸಮಾಜ ಕಲ್ಯಾಣ ಇಲಾಖೆಗೆ ಸೇರಿದ 1ನೇ ತರಗತಿಯಿಂದ ಸ್ನಾತಕೋತ್ತರ ವ್ಯಾಸಂಗದ ವರೆಗಿರುವ ವಿದ್ಯಾರ್ಥಿ ನಿಲಯಗಳ ಸಂಖ್ಯೆ ಎಷ್ಟು? ಈ ವಸತಿ ನಿಲಯಗಳ ವಿದ್ಯಾರ್ಥಿಗಳಿಗೆ ಒದಗಿಸಲಾಗಿರುವ ಸವಲತ್ತುಗಳೇನು?

ಆ) ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ ವಿದ್ಯಾರ್ಥಿನಿಲಯಗಳಲ್ಲಿಯೇ ಹೆಚ್ಚಾಗಿ ಅವ್ಯವಸ್ಥೆಗಳು (ಶುಚಿತ್ವ ಕೊರಡಿಗಳ ಕೊರತೆ ಮತ್ತು ಆಹಾರದ ಕೊರತೆ) ಕಂಡು ಬರುತ್ತಿದ್ದು ಈ ಬಗ್ಗೆ ಸರ್ಕಾರವು ಕೈಗೊಂಡಿರುವ ಕ್ರಮಗಳೇನು?

ಇ) ರಾಜ್ಯದಲ್ಲಿರುವ ಸಮಾಜ ಕಲ್ಯಾಣ ಇಲಾಖೆಗೆ ಸೇರಿದ ವಿದ್ಯಾರ್ಥಿ ನಿಲಯಗಳ ಸಂಖ್ಯೆ ಎಷ್ಟು? ಅವುಗಳಲ್ಲಿ ಎಷ್ಟು ಸ್ವಂತ ಕಟ್ಟಡಗಳನ್ನು ಹೊಂದಿವೆ ಹಾಗೂ ಎಷ್ಟು ವಿದ್ಯಾರ್ಥಿ ನಿಲಯಗಳು ಬಾಡಿಗೆ ಕಟ್ಟಡಗಳಲ್ಲಿ ಕಾರ್ಯ ನಿರ್ವಹಿಸುತ್ತಿವೆ? ಸ್ವಂತ ಕಟ್ಟಡ ನಿರ್ಮಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು (ಸಮಗ್ರ ಮಾಹಿತಿ ನೀಡುವುದು)?

ಈ) ವಿದ್ಯಾರ್ಥಿನಿಲಯಗಳಲ್ಲಿ ಪ್ರತಿ ವಿದ್ಯಾರ್ಥಿಗೆ/ವಿದ್ಯಾರ್ಥಿನಿಯರಿಗೆ ಒಂದು ತಿಂಗಳಿಗೆ ತಗಲುವ ವೆಚ್ಚವೆಷ್ಟು?

ಉ) ಯಾವ ಯಾವ ಸವಲತ್ತುಗಳನ್ನು ಒದಗಿಸಲಾಗುತ್ತಿದೆ? (ವಿವರ ಒದಗಿಸುವುದು)

**ಶ್ರೀ ಬಾಲಚಂದ್ರ ಲ ಜಾರಕಿಹೊಳಿ (ಸಮಾಜ ಕಲ್ಯಾಣ ಸಚಿವರು)**

ಅ) ರಾಜ್ಯದಲ್ಲಿ ಸಮಾಜ ಕಲ್ಯಾಣ ಇಲಾಖೆಯಿಂದ ಒಟ್ಟು 1485 ವಿದ್ಯಾರ್ಥಿನಿಲಯಗಳನ್ನು 1ನೇ ತರಗತಿಯಿಂದ ಸ್ನಾತಕೋತ್ತರ ವ್ಯಾಸಂಗದವರೆಗಿನ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗಾಗಿ ನಿರ್ವಹಿಸಲಾಗುತ್ತಿದೆ (2006–07ನೇ ಸಾಲಿನಲ್ಲಿ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗಾಗಿ 50 ಹೊಸ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸಲು ಆದೇಶಿಸಲಾಗಿರುವ ವಿದ್ಯಾರ್ಥಿ ನಿಲಯಗಳು ಸೇರಿದಂತೆ) ಈ ವಸತಿ ನಿಲಯದಲ್ಲಿನ ಮೆಟ್ರಿಕ್ ಪೂರ್ವ ವಿದ್ಯಾರ್ಥಿಗಳಿಗಾಗಿ ಆಹಾರ, ಸಮವಸ್ತ್ರ, ವೈದ್ಯಕೀಯ ವೆಚ್ಚ, ಪಠ್ಯಪುಸ್ತಕ, ಬಾಲಕರಿಗೆ ಕ್ಷೌರ, ಮೂರು ವರ್ಷಕ್ಕೊಮ್ಮೆ ಹಾಸಿಗೆ, ಹೊದಿಕೆಗಳು ಹಾಗೂ ವಸತಿ ಸೌಲಭ್ಯ ಒದಗಿಸುವ ಜೊತೆಗೆ ಗಣಿತ, ವಿಜ್ಞಾನ, ಇಂಗ್ಲೀಷ್ ವಿಷಯಗಳಿಗೆ 6 ತಿಂಗಳು ವಿಶೇಷ ಬೋಧನೆ ನೀಡಲು 3 ಜನ ಅರೆಕಾಲಿಕ ಬೋಧಕರುಗಳನ್ನು ಒದಗಿಸಲಾಗುತ್ತಿದೆ ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ ಆಹಾರದ ವೆಚ್ಚವನ್ನು ಒದಗಿಸಲಾಗುತ್ತಿದೆ

ಆ) ರಾಜ್ಯದಲ್ಲಿ 1091 ವಿದ್ಯಾರ್ಥಿನಿಲಯಗಳು ಸ್ವಂತ ಕಟ್ಟಡಗಳಲ್ಲಿದ್ದು, ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲಾಗಿದೆ 394 ವಿದ್ಯಾರ್ಥಿನಿಲಯಗಳು ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿವೆ, ಬಾಡಿಗೆ ಕಟ್ಟಡಗಳಲ್ಲಿ ಸ್ಥಳಾವಕಾಶದ ಕೊರತೆ, ಸ್ನಾನಗೃಹ ಮತ್ತು ಶೌಚಾಲಯಗಳ ಕೊರತೆ ಇರುತ್ತದೆ ಇವುಗಳಿಗೆ ಮೂಲಭೂತ ಸೌಲಭ್ಯಗಳನ್ನು

ಕಲ್ಪಿಸಲು ಹೊಸ ಕಟ್ಟಡ ನಿರ್ಮಾಣ ಮಾಡಲು ಆಯವ್ಯಯದಲ್ಲಿ ಒದಗಿಸಿದೆ ಅನುದಾನ ಹಾಗೂ ನಿವೇಶನದ ಲಭ್ಯತೆಗಳನ್ನು ಅನುಸರಿಸಿ ಅಧ್ಯತೆಯ ಮೇಲೆ ಕಟ್ಟಡ ನಿರ್ಮಾಣವನ್ನು ಕೈಗೊಳ್ಳಲಾಗುತ್ತಿದೆ ಹಾಲಿ ಸ್ವಂತ ಕಟ್ಟಡಗಳಿರುವ ವಿದ್ಯಾರ್ಥಿನಿಲಯಗಳಿಗೆ ಶೌಚಾಲಯ, ಸ್ನಾನದ ಗೃಹ, ಊಟದ ಕೊರಡಿ, ಅಡುಗೆ ಮನೆ, ದುರಸ್ತಿ, ಸುಣ್ಣ ಬಣ್ಣ ಹಾಸಿಗೆ ಇತ್ಯಾದಿ ಅವಶ್ಯಕ ಕಾಮಗಾರಿಗಳನ್ನು ಕೈಗೊಳ್ಳಲು ಆಯವ್ಯಯದಲ್ಲಿ ಒದಗಿಸಿದ ಅನುದಾನದ ಜೊತೆಗೆ ವಿಶೇಷ ಘಟಕ ಯೋಜನೆಯಡಿ ಗುಂಪುಗೂಡಿಸಿದ ಅನುದಾನದಲ್ಲಿ ಅನುದಾನವನ್ನು ಒದಗಿಸಿಕೊಂಡು ಕ್ರಮ ಕೈಗೊಳ್ಳಲಾಗುತ್ತಿದೆ

ಇ) ರಾಜ್ಯದಲ್ಲಿ ಸಮಾಜ ಕಲ್ಯಾಣ ಇಲಾಖೆಗೆ ಸೇರಿದ ಒಟ್ಟು 1485 ಪರಿಶಿಷ್ಟ ಜಾತಿಯ ವಿದ್ಯಾರ್ಥಿ ನಿಲಯಗಳಿವೆ ಇವುಗಳಲ್ಲಿ 1091 ವಿದ್ಯಾರ್ಥಿನಿಲಯಗಳು ಸ್ವಂತ ಕಟ್ಟಡದಲ್ಲಿವೆ 394 ವಿದ್ಯಾರ್ಥಿನಿಲಯಗಳು ಬಾಡಿಗೆ ಕಟ್ಟಡದಲ್ಲಿದೆ 133 ವಿದ್ಯಾರ್ಥಿನಿಲಯಗಳು ನಿರ್ಮಾಣ ಹಂತದಲ್ಲಿವೆ ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿರುವ ವಿದ್ಯಾರ್ಥಿ ನಿಲಯಗಳಿಗೆ ಸ್ವಂತ ಕಟ್ಟಡ ನಿರ್ಮಿಸಲು ಅನುದಾನದ ಲಭ್ಯತೆ ಹಾಗೂ ನಿವೇಶನದ ಲಭ್ಯತೆಯನ್ನು ಅನುಸರಿಸಿ ಸೂಕ್ತ ಕ್ರಮ ಕೈಗೊಳ್ಳಲಾಗುತ್ತಿದೆ

ಈ) ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯದ ಪ್ರತಿ ಬಾಲಕ ಬಾಲಕಿಯರಿಗೆ ಪ್ರತಿ ತಿಂಗಳಿಗೆ ರೂ 450–00 ಹಾಗೂ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯದ ಪ್ರತಿ ಬಾಲಕ ಬಾಲಕಿಯರಿಗೆ ಪ್ರತಿ ತಿಂಗಳಿಗೆ ರೂ 500–00ರಂತೆ ಆಹಾರಕ್ಕಾಗಿ ವೆಚ್ಚ ಮಾಡಲಾಗುತ್ತಿದೆ

ಉ) ಈ ವಿದ್ಯಾರ್ಥಿನಿಲಯಗಳಲ್ಲಿನ ವಿದ್ಯಾರ್ಥಿಗಳಿಗೆ ಈ ಕೆಳಕಂಡ ಸವಲತ್ತುಗಳನ್ನು ಒದಗಿಸಲಾಗುತ್ತಿದೆ

**ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳು –**

ಆಹಾರ, ಸಮವಸ್ತ್ರ, ಪಠ್ಯಪುಸ್ತಕ, ಹಾಸಿಗೆ, ಹೊದಿಕೆ, ಬಾಲಕರಿಗೆ ಕ್ಷೌರ, ವೈದ್ಯಕೀಯ ವೆಚ್ಚ ಹಾಗೂ ಗಣಿತ, ವಿಜ್ಞಾನ, ಇಂಗ್ಲೀಷ್ ವಿಷಯಗಳಿಗೆ ವಿಶೇಷ ಬೋಧನೆಗಳು

**ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳು –**

ಆಹಾರದ ವ್ಯವಸ್ಥೆಯನ್ನು ಒದಗಿಸಲಾಗುತ್ತಿದೆ